(SRI M. RAJASHKHARA MURTHY)

1		2	3
5	Gajjepooje	... M/s. Chitra Jyothi, Bangalore	50,000
6	Kallarakalla	... M/s. Bharani Chitra, B'lore	50,000
7	Rangamahalrahasya	... M/s. Maheswari Movies, Mysore	50,000
8	Kanneeru	... M/s. Madhureswari Films, B'lore	50,000
9	Chowkadadeepa	... M/s. Sharada Films, Mysore	50,000
10	Anireekshita	... M/s. Chitra Ratna, Bangalore	50,000
11	Arisina Kumkuma	... M/s. Gurubhakti Films, Chitradurga	50,000
12	Mukundachandra	... M/s. Malladi Movies, Davangere	50,000
13	Aparajite	... M/s. Mysore Movies, Mysore	50,000
14	Balekiladi	... M/s. Premier Studios, Mysore	50,000

Suspension of Subsidy to Kannada Pictures

143. Sri D. B. KALMANKAR (Aland). —

Will the Minister for Industries, Information and Publicity be pleased to state :—

(*a*) whether the Resources Committee has recommended for the suspension of the system of giving subsidy grant to the Kannada pictures producers ,

(*b*) if so, the action taken on the recommendation ?

Sri M. RAJASEKHARA MURTHY (Minister for Industries, Information and Publicity).—

(*a*) Yes.

(*b*) After careful consideration of the recommendations, Government have decided to continue the subsidy scheme for the year 1970-71.

Sri H. N. NANJE GOWDA.—My question was whether Sri Ramakrishna Hegde, the Finance Minister, informed that the Cabinet has decided to abolish the subsidy from 1st April 1970 and whether the Minister for Industries contradicted that statement in his Press Conference ? There is no specific answer to this question.

† Sri VEERENDRA PATIL.—The specific answer is that generally the recommendations of the Resources Committee were accepted. One

of the recommendations of the Resources Committee was to abolish the subsidy to films, when we came to know that a separate decision was necessary with regard to that also, we took a separate decision. With regard to the subsidy to films we took a decision to continue it up to the end of 1970-71.

ಶ್ರೀ ಎಚ್. ಎನ್. ನಂಜೇಗೌಡ.—ಇದನ್ನು ನಿಲ್ಲಿಸುವುದಕ್ಕೆ ಕ್ಯಾಬಿನೆಟ್ ತೀರ್ಮಾನ ಕೈಕೊಂಡಿದ್ದಾರೆ ಎಂದು ಹಣಕಾಸಿನ ಮಂತ್ರಿಗಳವರು ಹೇಳಿದ್ದಾರೆಯೇ ಇಲ್ಲವೇ, ಹಾಗೂ ಕೈಗಾರಿಕಾ ಮಂತ್ರಿಗಳು ಇಲ್ಲ ಎಂದು ಕಾಂಟ್ರಡಿಕ್ಟ್ ಮಾಡಲಿಲ್ಲವೇ ಪತ್ರಿಕಾ ಸಂದರ್ಶನದಲ್ಲಿ, ಎಂದು ಕೇಳುತ್ತಾ ಇದ್ದೇನೆ. ಅದಕ್ಕೆ ನೇರವಾಗಿ ಉತ್ತರ ಹೇಳಿ.

ಶ್ರೀ ವೀರೇಂದ್ರ ಪಾಟೀಲ್.—ನೇರವಾಗಿ ಉತ್ತರ ಹೇಳಬೇಕೆಂದೇ ನಾನು ಹೇಳಿರುವುದು. ರಿಸೋರ್ಸಸ್ ಕಮಿಟಿಯಲ್ಲಿ ಅನೇಕ ರೆಕಮಂಡೇಷನ್‌ಗಳು ಇದ್ದವು, ಒಂದು ಜನರಲ್ ಡಿಸಿಷನ್ ತೆಗೆದುಕೊಂಡೆವು, ಅದರಲ್ಲಿ ಇದೂ ಸೇರಿದೆಯೇ ಅಂತ ಕನ್‌ಫ್ಯೂಷನ್ ಬಂತು. ಇದರ ಸಲುವಾಗಿ ಮತ್ತೊಂದು ಪ್ರತ್ಯೇಕವಾದ ಡಿಸಿಷನ್ ತಗೆದುಕೊಳ್ಳಬೇಕಾದ ಅವಶ್ಯಕತೆ ಬಂತು. ಜನರಲ್ ಡಿಸಿಷನ್ ಅಪ್ರೂವಲ್ ಆಗಿದೆ ಎಂಬ ರೆಕ್ಕದಿಂದ ಫೈನಾನ್ಸ್ ಮಿನಿಸ್ಟ್ರರು ಇದಕ್ಕೆ ಅಪ್ರೂವಲ್ ಆಗಿದೆ ಎಂದುಹೇಳಿದರು. ಬಹುಶಃ ಇಂಡಸ್ಟ್ರೀಸ್ ಮಿನಿಸ್ಟ್ರರು ಪ್ರತ್ಯೇಕವಾಗಿ ತೀರ್ಮಾನವಾದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಕನ್‌ಫ್ಯೂಷನ್ ಕ್ಲಿಯರ್ ಮಾಡುವುದರ ಸಲುವಾಗಿ ಇದರ ಬಗ್ಗೆ ಪ್ರತ್ಯೇಕವಾದ ಡಿಸಿಷನ್ ತೆಗೆದುಕೊಂಡರು.

Sri M. S. KRISHNAN.—Is it a fact that the Minister for Industries has made a statement contradicting the Minister for Finance?

Sri VEERENDRA PATIL.—I do not know whether the hon. Members are basing their information on the press reports. I made it very clear that there was some confusion and that confusion was because a general decision was taken with regard to all the recommendations of the Resources Committee. This was one of the recommendations and the Finance Minister thought that all the recommendations of the Resources Committee were approved by the Government and the Minister for Industries thought that a specific decision on this issue was necessary. Out of this confusion, this controversy arose. When we came to know that there was confusion and misunderstanding we made the matter very clear by taking a decision again in the Cabinet.

Sri B. P. GANGADHAR.—You were pleased to say that the Resources Committee resolved for the abolition of this subsidy which you used to make *i.e.*, Rs. 50,000 per film and you also made assertions on the floor of the House that there is no adequate fund for taking up many big projects. Therefore, when the Resources Committee recommended for abolition, what was the grave situation on the side of the Government to give concession so far as this subsidy is concerned? Is it correct that people are saying that the Government has committed itself to many of the producers and several Ministers are involved indirectly in the production of these films and that is why the recommendation of the committee was given a go-by and you continued to give this subsidy for this year also?

Sri VEERENDRA PATIL.—The presumptions of the hon. Member are not correct. No Member of the Cabinet is having direct or indirect relationship with any production of film. I do not think there are any producers in my Cabinet. The decision that we have taken is purely in

(SRI VEERENDRA PATIL)

the interest of film industry because all of a sudden if we stop giving subsidy without giving prior notice, we have to consider the adverse effect it will have on the industry. After all we must remember that a lot of people are involved in this film industry. If all of a sudden we stop the subsidy it will adversely affect the industry. After all we have started giving this subsidy very recently and we must give a fair trial. We have not committed that we are permanently going to give the subsidy. We have said pending detailed consideration we will continue up to 1970-71.

ಶ್ರೀ ಕೆ. ಎಚ್. ರಂಗನಾಥ್.—1-4-1970 ರಿಂದ ಸಬ್‌ಸಿಡಿ ಕೊಡುವಾರದು ಎಂದು ಕ್ಯಾಬಿನೆಟ್ ತೀರ್ಮಾನ ತೆಗೆದುಕೊಂಡಿರುವುದು ರಿಸೋರ್ಸಸ್ ಕಮಿಟಿಯವರ ರೆಕಮೆಂಡೇಷನ್ನೇ ?

Sri VEERENDRA PATIL.—I have to repeat the same thing. I have already said that the recommendations made by the Resources Committee were accepted in general and abolition of subsidy to the films is also one of the recommendations.

Sri K. H. RANGANATH.—May I know whether the information given by the Finance Minister to the public that the Cabinet has taken a decision to abolish the subsidy to films is one of the recommendations of the Resources Committee ?

Sri VEERENDRA PATIL.—The hon. Member wants to know whether a statement made by the Finance Minister that subsidy will be stopped was also one of the recommendations of the Resources Committee. I made it clear that the abolition of subsidy to films was one of the recommendations of the Committee and the Government took decision in general approving all the recommendations. But so far as this was concerned, because we received a lot of representations we thought that if we stop subsidy abruptly it will affect the film industry and therefore we must give further consideration to the problem. In the meanwhile we thought that we must continue the subsidy up to 1970-71.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಸ್ವಾಮಿ, ಈ ಒಂದು ಫಿಲ್ಮ್ ಕೈಗಾರಿಕೆ ಮೈಸೂರು ಸಂಸ್ಥಾನದಲ್ಲಿ ಹೊಸದಾಗಿ ಬೆಳೆದುಕೊಂಡು ಬರುತ್ತಾ ಇರುವುದರಿಂದ, ಅದಕ್ಕೆ ಸಬ್ಸಿಡಿ ಕೊಡುತ್ತಾ ಇರುವುದರಿಂದ ಅನೇಕ ಸ್ಟುಡಿಯೋಗಳು ಮತ್ತು ಆರ್ಟಿಸ್ಟುಗಳು ಇದಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಉದ್ಯಮಗಳು ಬೆಳೆಯುತ್ತಾ ಬರುತ್ತಿವೆ. ಆದ್ದರಿಂದ ಈ ಸಬ್‌ಸಿಡಿಯನ್ನು ನಿಲ್ಲಿಸದೆ ಮುಂದುವರಿಸಿ ಇನ್ನೂ ಉತ್ತಮ ಚಿತ್ರಗಳು ಬರುವಂತೆ ಸರಕಾರದವರು ಅವಕಾಶ ಕಲ್ಪಿಸುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೆ ನಾನು ಹೇಳಿದೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ ಅಂತಿಮ ನಿರ್ಧಾರಕ್ಕೆ ಬರಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ಈ ಹೊತ್ತು ಈ ಇಂಡಸ್ಟ್ರಿಯನ್ನಲ್ಲಿ ಸಾವಿರಾರು ಜನ ಉಪಜೀವನ ನಡೆಸುತ್ತಿದ್ದಾರೆ ಮತ್ತು ನಮ್ಮ ಫಿಲ್ಮ್‌ಗೆ ಯಾವ ತರಹ ಪ್ರೋತ್ಸಾಹ ಇಲ್ಲ, ಆರ್ಟಿಸ್ಟ್‌ಗಳಿಗೆ ಯಾವ ತರಹ ಪ್ರೋತ್ಸಾಹ ಇಲ್ಲ ಎಂದು ಅನೇಕ ದೂರುಗಳು ಬರುತ್ತಾ ಇವೆ.

Sri H. SIDDAVEERAPPA.—Was it not a fact that the Resources Committee took a decision to abolish the subsidy to the films from 1st April 1970 and Minister for Industries was also present at the

meeting and he also agreed for stopping the subsidy from that date onwards? Is it also not a fact that in pursuance of that decision it was mentioned that subsidy will be stopped from 1st April 1970 and if so, where was the reason for changing it and has the Cabinet revised the recommendation of the Committee and given a go-by to the recommendation of the Resources Committee?

Sri VEERENDRA PATIL.—What happened in the Resources Committee and who were there and who agreed, all those details are not before me. But if the hon. Member presumes that whatever the Resources Committee has decided, it is a final decision, I think the presumption is not correct. After all the Resources Committee is only expected to make recommendations and it is for the Government to take a decision. Whatever the Government thought fit in the matter, they have taken decision accordingly.

1-30 P.M.

ಶ್ರೀ ನಾಗಪ್ಪ.—ಚಲನಚಿತ್ರಗಳಿಗೆ ಸಬ್ಸಿಡಿ ಕೊಡುವ ಪದ್ಧತಿ ಜಾರಿಗೆ ಬಂದಮೇಲೆ ಕನ್ನಡದ ಒಳ್ಳೊಳ್ಳೆಯ ಚಿತ್ರಗಳು ಕಡಿಮೆಯಾಗಿ ಬರೊ ಸ್ಟಾಂಡರ್ಡ್ ಚಿತ್ರಗಳು ಬರುತ್ತಿವೆ. ಇದರಿಂದ ಯೋಗ್ಯತೆ ಇರಲಿ, ಯೋಗ್ಯತೆ ಇಲ್ಲದೇ ಇರಲಿ, ಪ್ರತಿಯೊಬ್ಬರೂ ಚಲನಚಿತ್ರಗಳನ್ನು ತೆಗೆಯುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆ. ಇದರಿಂದ ತುಂಬಾ ಅನಾನುಕೂಲವಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಸಬ್ಸಿಡಿ ಕೊಡಲು ಪ್ರಾರಂಭ ಮಾಡಿದಮೇಲೆ ಪ್ರೊಡಕ್ಷನ್ ಜಾಸ್ತಿಯಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಪಿಕ್ಚರ್ ಸ್ಟಾಂಡರ್ಡ್ ಪ್ರಶ್ನೆ ವಿಚಾರವಾಗಿ ಹೇಳಬೇಕಾದರೆ, ಕನ್ನಡ ಪಿಕ್ಚರ್ ಸ್ಟಾಂಡರ್ಡ್ ಒಂದೇ ಅಲ್ಲ, ಹಿಂದಿ ಪಿಕ್ಚರ್ ಆಗಲಿ, ಮತ್ತೆ ಯಾವುದಾದರೂ ಪಿಕ್ಚರ್ ನೋಡಿದರೆ, ಎಲ್ಲಾ ಕಡೆಯೂ ಸ್ಟಾಂಡರ್ಡ್ ಬೀಳುತ್ತಿದೆ. ಪಿಕ್ಚರ್‌ಗಳ ಸ್ಟಾಂಡರ್ಡ್ ಮೇಂಟೇನ್ ಮಾಡುವುದಕ್ಕೆ ಏನೇನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ಕನ್ನಡ ಪಿಕ್ಚರ್‌ಗಳೂ ಸಹ ಒಳ್ಳೆಯ ರೀತಿಯಿಂದ ಹೆಚ್ಚು ಹೆಚ್ಚಾಗಿ ಪ್ರೊಡ್ಯೂಸ್ ಆಗುವುದಕ್ಕೆ ಏನೇನು ಮಾಡಬೇಕೆನ್ನುವುದನ್ನು ನಾವು ದೀರ್ಘವಾಗಿ ವಿಚಾರಮಾಡಿ ಪರಿಶೀಲನೆ ಮಾಡಬೇಕಾಗಿದೆ. ಅಷ್ಟರಲ್ಲಿ ಸಬ್ಸಿಡಿ ಕಂಟಿನ್ಯೂ ಆಗಲಿ ಎಂಬ ದೃಷ್ಟಿಯಿಂದ ಈ ವರ್ಷವೂ ಮುಂದುವರಿಸಬೇಕೆಂದು ನಿರ್ಧರಿಸಲಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಬಹಳ ಜನ ಚಿತ್ರ ನಿರ್ಮಾಪಕರು ಇಲ್ಲಿಗೆ ಬಂದು ಪಿಕ್ಚರ್ ತಯಾರಿಕೆಯಲ್ಲಿ ತೊಡಗಿದ್ದಾರೆ. ಅವರು ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ. ಅನೇಕ ಚಿತ್ರಗಳಿಗೆ ನುಸಜ್ಜಿತ ವಾದಂಥ ಪಿಕ್ಚರ್ ಹೌಸ್‌ಗಳನ್ನು ಮಾಡಿಸಿಕೊಡುತ್ತೇವೆಂದು ಸರ್ಕಾರದವರು ಘೋಷಣೆ ಮಾಡಿದ್ದಾರೆ. ಕೆಲವು ಸದಸ್ಯರೂ ಕೂಡ ಪಿಕ್ಚರ್ ತಯಾರಿಕೆಯ ಪ್ರಯತ್ನ ಮಾಡಿದ್ದಾರೆ. ನಿನ್ನೆ ಇಲ್ಲಿ ರಿಹರ್ಸಲ್ ಸಹ ಆಯಿತು. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರೂ ಸಹ ಕನ್ನಡ ಚಳುವಳಿಯ ಮೇಲೆ ಒಂದು ಪಿಕ್ಚರನ್ನು ತಯಾರು ಮಾಡುತ್ತಿದ್ದಾರೆ. ಅದರಲ್ಲಿ ಅವರೇ ಹೀರೊ ಪಾರ್ಟ್ ಮಾಡುತ್ತಿದ್ದಾರೆ. ಇನ್ನು ಪಿಕ್ಚರ್ ಯಾವ ರೀತಿ ಇರುತ್ತದೆಂಬುದನ್ನು ಸದಸ್ಯರು ಊಹಿಸಿ ಬಹುದು. ಆದ್ದರಿಂದ ಸರ್ಕಾರದಿಂದ ಹೆಚ್ಚಿಗೆ ಅವರಿಗೂ ದುಡ್ಡು ಕೊಡುವುದಕ್ಕೆ ಅವಕಾಶ ಏದೆಯೇ?

(ಉತ್ತರವಿಲ್ಲ)

ಶ್ರೀ ಎಸ್. ಪಿ. ಅಗ್ನಿಹೋತ್ರಿ.—ಮಾನ್ಯ ಸದಸ್ಯರಾದ ಶ್ರೀ ಕೆ. ಎಚ್. ಪಾಟೀಲ್ ಅವರು 'ಸಹಕಾರ ಸಂಘ' ಎಂಬುದಾಗಿ ಪಿಕ್ಚರ್ ತೆಗೆದಿದ್ದಾರೆ. ಸರ್ಕಾರದಿಂದ ಅದಕ್ಕೂ ಸಬ್ಸಿಡಿ ಕೊಡುತ್ತಾರೆಂಬ ವದಂತಿ ಬಂದಿದೆ ಅದು ನಿಜವೇ ಅಥವಾ ಸುಳ್ಳೇ?

(ಉತ್ತರವಿಲ್ಲ)

ಶ್ರೀ ಕೆ. ಎಂ. ತಮ್ಮಯ್ಯ.—ಉತ್ತರದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಮಂತ್ರಿ ಮಂಡಲ ಸಬ್ಸಿಡಿಯನ್ನು ನಿಲ್ಲಿಸಬೇಕೆಂದು ತೀರ್ಮಾನವನ್ನು ಕೈಗೊಂಡಿದೆ ಎಂದು ಹೇಳಿದ್ದಾರೆ. ಕೈಗಾರಿಕೆ ಮಂತ್ರಿಗಳು ಸಹಾಯ ಧನ ರದ್ದು ಮಾಡುವ ತೀರ್ಮಾನವನ್ನು ಮಂತ್ರಿಮಂಡಲ ಕೈಗೊಂಡಿಲ್ಲವೆಂದು ಹೇಳಿದ್ದಾರೆ. ಮಂತ್ರಿಮಂಡಲದ ತೀರ್ಮಾನದ ಬಗ್ಗೆ ಯಾರದು ನಿಜ ? ಮಾನ್ಯ ಅರ್ಥಮಂತ್ರಿಗಳು ಹೇಳಿದ್ದು ನಿಜವಾಗಿದ್ದರೆ, ಕೈಗಾರಿಕಾ ಮಂತ್ರಿಗಳು ಹೇಳಿದ್ದು ಸತ್ಯಕ್ಕೆ ದೂರವಾದ ಸಂಗತಿಯೇ ? ಅಥವಾ ಮಾನ್ಯ ಕೈಗಾರಿಕೆ ಮಂತ್ರಿಗಳು ಹೇಳಿದ್ದು ನಿಜವಾಗಿದ್ದರೆ, ಅರ್ಥ ಮಂತ್ರಿಗಳು ಹೇಳಿದ್ದು ಸತ್ಯಕ್ಕೆ ದೂರವಾದ ಸಂಗತಿಯೇ ? ಇದರಿಂದ ಈ ವಿಚಾರದ ಬಗ್ಗೆ ಯಾರಿಂದ ಅಪಾಲಜಿ ಬರೆಸಿಕೊಳ್ಳಬೇಕೆಂದು ಇದನ್ನು ತೀರ್ಮಾನಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಯಾರಿಂದಲೂ ಅಪಾಲಜಿ ಬರೆಸಿಕೊಳ್ಳುವ ಪ್ರಮೇಯ ವಿಲ್ಲ. ಆ ಪ್ರಶ್ನೆ ಉದ್ಭವಿಸುವುದೂ ಇಲ್ಲ. ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಈಗಾಗಲೇ ಉತ್ತರ ಹೇಳಿದ್ದೇನೆ. ಅದನ್ನೇ ಪುನಃ ಹೇಳುವುದು ಸರಿಯಲ್ಲ.

Sri H. SIDDAVEERAPPA.—I would like to know whether the recommendation of the Resources Committee that the subsidy be stopped, was not accepted by the Government ? If the recommendation of the Committee was accepted, I want to know whether the Government has revised its opinion ? The Chief Minister has said in reply to the question of Sri Jwalaniah that the subsidy is continued for this year. I want to know what is going to happen next year.

Sri VEERENDRA PATIL.—I am very sorry I have to repeat the same thing what I have said already. I said the recommendations of the Resources Committee were accepted in general. After receiving representations, we thought that it is necessary to revise our decision. Therefore the whole thing was reviewed again and decided that the subsidy should be continued for the time being. I cannot say what would happen next year.

ಶ್ರೀ ಸಿ. ಎಂ.ಎಸ್. ಶಾಸ್ತ್ರಿ.—ಚಲನಚಿತ್ರಗಳಿಗೆ ಸಹಾಯ ಧನವನ್ನು ಕೊಡುವುದನ್ನು ಈಗ ರಾದರೂ ನಿಲ್ಲಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಪ್ರಶ್ನೆಯ ಬಗ್ಗೆ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಈ ಪ್ರಶ್ನೆಗೆ ಕಾರಾವಕಾಶ ಹೆಚ್ಚಿಗೆ ಬೇಕು. ಬಹಳ ಮುಖ್ಯವಾದ ಪ್ರಶ್ನೆ. ಇಂಥಾದ್ದಕ್ಕೆ ಹೆಚ್ಚು ಕಾರಾವಕಾಶವನ್ನು ಕೊಡವಿದ್ದರೆ ಈ ಪ್ರಶ್ನೋತ್ತರ ವೇಳೆ ಏಕೆ ಇರಬೇಕೆಂದು ನಾನು ಕೇಳುತ್ತೇನೆ. ತಮ್ಮಿಂದ ನಾವು ರಕ್ಷಣೆಯನ್ನು ಕೇಳುತ್ತಿದ್ದೇವೆ. ನಿಮಗೆ ನಮ್ಮನ್ನು ನೋಡಿದರೆ ಗೌರವವಿಲ್ಲ. ನೀವು ಸರ್ಕಾರದ ಪರವಾಗಿ ವರ್ತಿಸುವ ರೀತಿಯಲ್ಲ ನಡೆದುಕೊಳ್ಳುತ್ತಿದ್ದೀರಿ. ನನ್ನ ಪ್ರಶ್ನೆಗೆ ನೇರವಾಗಿ ಉತ್ತರವನ್ನು ಸರ್ಕಾರದವರು ಕೊಡುತ್ತಾ ಇಲ್ಲ. * * * *

ಶ್ರೀ ಎಚ್. ಎನ್. ನಂಜೇಗೌಡ.—ನಿಮ್ಮ ಈ ಮತೋಧರ್ಮವನ್ನು ವಿರೋಧಿಸಿ ನಾನು ಸಭಾ ತ್ಯಾಗ ಮಾಡುತ್ತೇನೆ.

(The Member withdrew)

ಶ್ರೀ ಜೆ. ಆರ್. ಹಾಲಸ್ವಾಮಿ.—ರಾಜ್ಯದಲ್ಲಿ ತಯಾರಾಗುವ ಎಲ್ಲಾ ಚಲನಚಿತ್ರಗಳಿಗೆ ಸಬ್ಸಿಡಿ ಕೊಡುವ ಬದಲು ಪಿಕ್ಚರ್‌ಗಳ ಗುಣಮಟ್ಟವನ್ನು ಕಾಪಾಡಲು ಅತ್ಯುತ್ತಮವಾದಂಥ ಪಿಕ್ಚರ್‌ಗಳಿಗೆ ಹೆಚ್ಚಿನ ಸಬ್ಸಿಡಿಯನ್ನು ಕೊಡುತ್ತೀರಾ ?

**** Matter not recorded as ordered by the Chair.

ಶ್ರೀ ವೀರೇಂದ್ರ ಪಾಟೀಲ್.—ಚಲನಚಿತ್ರಗಳ ಗುಣಮಟ್ಟವನ್ನು ಯಾವರೀತಿ ಹೆಚ್ಚು ಮಾಡ ಬೇಕೆಂಬುದು ಸರ್ಕಾರದ ಪರಿಶೀಲನೆಯಲ್ಲಿದೆ. ಗುಣಮಟ್ಟ ಯಾವರೀತಿ ಹೆಚ್ಚು ಮಾಡಬೇಕು, ಈ ಚಲನಚಿತ್ರ ಕೈಗಾರಿಕೆಗಳಿಗೆ ಯಾವ ರೀತಿಯಲ್ಲಿಯೂ ಧಕ್ಕೆ ಬಾರದಂತೆ ಯಾವ ರೀತಿ ನೋಡಿಕೊಳ್ಳ ಬೇಕೆಂಬ ಅನೇಕ ವಿಚಾರಗಳನ್ನು ನಾವಿನ್ನೂ ಪರಿಶೀಲನೆ ಮಾಡಬೇಕಾಗಿದೆ. ಈ ಮಧ್ಯದಲ್ಲಿ ನಾವು ಸಬ್ಸಿಡಿಯನ್ನು ಈ ವರ್ಷ ಕಂಟಿನ್ಯೂ ಮಾಡಬೇಕೆಂದು ಮಾಡಿದ್ದೇವೆ.

Sri D. B. KALMANKAR.—May I know the criteria that was adopted in granting subsidy to various film producing companies ?

Sri VEERENDRA PATIL.—I think the criteria has been laid down in the Government order in this connection. All pictures produced entirely in the Mysore State, are entitled for subsidy.

ಶ್ರೀ ಸಿದ್ದಯ್ಯ ಕರಿಶೀಮಠ.—ಈಗ ಹಣವನ್ನು ಚಲನಚಿತ್ರ ನಿರ್ಮಾಪಕರಿಗೆ ಕೊಡುವುದಕ್ಕಿಂತ ಪಾತ್ರದಾರರಿಗೆ ಕೊಡುವಂತೆ ಏರ್ಪಾಡು ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಪಾತ್ರದಾರರಿಗೆ ಹಣ ಕೊಡುವ ಮತ್ತೊಂದು ಯೋಚನೆ ಇದೆ. ಯಾವುದು ಒಳ್ಳೆಯ ಚಿತ್ರವಿರುತ್ತದೆ, ಆ ಚಿತ್ರದ ತಯಾರಿಕೆದಾರರಿಗೆ ಪ್ರೈಸ್—50 ಸಾವಿರ, 25 ಸಾವಿರ, ಹೀಗೆ ಕೊಡುತ್ತೇವೆ. ಆದರೆ ಪಿಕ್ಚರನ್ನು ಒಳ್ಳೆಯ ಮಟ್ಟಕ್ಕೆ ತರುವುದಕ್ಕೆ ಕಾರಣರು ಡೈರೆಕ್ಟರು ಇರುತ್ತಾರೆ, ನಟರು ಇರುತ್ತಾರೆ. ಅವರಿಗೆ ಕೂಡ ಕ್ಯಾಷ್ ಪ್ರೈಸ್ ಕೊಡುವ ಯೋಚನೆ ಇದೆ. ಆ ರೀತಿಯಿಂದ ಅವರಿಗೆ ಎನ್‌ಕರೇಜ್‌ಮೆಂಟ್ ಕೊಡುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಾವು ಈಗಾಗಲೇ ಚಲನಚಿತ್ರಗಳಿಗೆ ಲಕ್ಷಾಂತರ ರೂಪಾಯಿ ಗಳನ್ನು ಕೊಟ್ಟುಬಿಟ್ಟಿದ್ದೀರಿ. ಈಗಲಾದರೂ, ಈ ಸಹಾಯ ಧನವನ್ನು ನಿಲ್ಲಿಸಿ, ಈ ಹಣವನ್ನು ಇದಕ್ಕಿಂತ ಉತ್ತಮವಾದ ಕೆಲಸಗಳಿಗೆ ಉಪಯೋಗಿಸುವುದಕ್ಕೆ ಕೊಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ಏನು ವಿಚಾರ ಮಾಡಿದ್ದಾರೆಂದರೆ, ಈ ಸಹಾಯ ಧನವನ್ನು ಸರ್ಕಾರದ ಬೊಕ್ಕಸವಿಂದ ಕೊಡುತ್ತಿದ್ದಾರೆ ಎಂದು. ಎಷ್ಟೋ ಫಿಲ್ಮಂಸ್ ಸ್ಕ್ರೀನ್ ಆಗುವಾಗ ಅದರ ಮೇಲೆ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಮುಂತಾದ ಟ್ಯಾಕ್ಸ್‌ಗಳ ಮೂಲಕ ಸರ್ಕಾರಕ್ಕೆ ಹಣ ಬರುತ್ತದೆ. ಇದು ಕೇವಲ ಡೆಬಿಟ್ ಸೈಡ್ ಇದೆ, ಕ್ರೆಡಿಟ್ ಸೈಡ್ ಇಲ್ಲವೆಂದು ತಿಳಿದುಕೊಳ್ಳಬಾರದು. ಹೀಗೆ ಬರುವಂತಹ ಟ್ಯಾಕ್ಸಿನಲ್ಲಿ ಸ್ವಲ್ಪ ಮಟ್ಟಿಗೆ ಕಾರ್ಪೊರೇಷನ್ನಿಗೆ ಹೋಗುತ್ತದೆ, ಮತ್ತು ಸರ್ಕಾರಕ್ಕೆ ಸರ್ಚಾರ್ಜ್ ಬರುತ್ತದೆ. ಅದರ ಸಲುವಾಗಿ ಅವೆಲ್ಲವನ್ನೂ ಪರಿಶೀಲನೆ ಮಾಡಬೇಕಾಗಿದೆ. ಅದನ್ನು ಸರ್ಕಾರದವರು 1970-71 ಆಖ್ಯಿರಿನವರೆಗೆ ಮುಂದುವರಿಸುತ್ತಾರೆ. ಅದರ ನಂತರ ಈ ಪ್ರಶ್ನೆಯನ್ನು ಪರಿಶೀಲನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕಾಗಿದೆ.

ಶ್ರೀ ಆರ್. ಜಿ. ಪಾಲ.—ನೀವು ಈಗ ಸಿನಿಮಾಕ್ಕೆ ಸಬ್ಸಿಡಿ ಕೊಡುವ ಹಾಗೆ, ಈ ದೆಶೆಯಲ್ಲಿ ಕೆಲಸ ಮಾಡುವ ನಾಟಕಗಳಿಗೂ ಸಬ್ಸಿಡಿ ಕೊಡುವ ವಿಚಾರ ಇದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಾಟಕಗಳಿಗೆ ಟ್ಯಾಕ್ಸ್ ಎಗ್ಸೆಂಪ್ಷನ್ ಮುಂತಾದ ರೀತಿಯಲ್ಲಿ ಸಹಾಯ ಮಾಡುತ್ತಾರೆ. ಮತ್ತು ನಾಟಕ ಕಂಪೆನಿಗಳು ನಾಟಕ ಪ್ರದರ್ಶನ ಮಾಡುವುದಕ್ಕೆ ಥಿಯೇಟರ್ ಬೇಕಾಗುತ್ತದೆ, ಅದನ್ನು ಕೂಡ ಯಾವ ರೀತಿ ಮಾಡಬೇಕೆಂಬುದನ್ನು ಪರಿಶೀಲನೆ ಮಾಡಲಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಈ ಸಹಾಯಧನವನ್ನು ಕನ್ನಡ ಚಿತ್ರಗಳು ಉತ್ತಮಗೊಳ್ಳಲು ಕೊಡುತ್ತಿರುವುದೆಂದು ಹೇಳುತ್ತಿದ್ದೀರಿ. ಈ ಸಹಾಯಧನವನ್ನು ಕನ್ನಡ ಚಿತ್ರಗಳಿಗೆ ಮಾತ್ರ ಕೊಡುತ್ತೀರಾ, ಅಥವಾ ಈ ರಾಜ್ಯದಲ್ಲಿ ತಯಾರಾವಂತಹ ಎಲ್ಲಾ ಭಾಷೆಯ ಚಿತ್ರಗಳಿಗೂ ಕೊಡುತ್ತೀರಾ ? ನನಗೆ ತಿಳಿದಿರುವ ಹಾಗೆ ಈ ರಾಜ್ಯದಲ್ಲಿ ತಯಾರಾದ ಎಲ್ಲಾ ಭಾಷೆಯ ಚಿತ್ರಗಳಿಗೂ ಕೊಡುತ್ತೀರಿ. ಎಲ್ಲಾ ಭಾಷೆಯ ಚಿತ್ರಗಳಿಗೂ ಸಹಾಯಧನ ಕೊಟ್ಟರೆ, ನಿಮ್ಮ ಉದ್ದೇಶ ಏನಿದೆ, ಅದು ಸಾರ್ಥಕವಾಗಲಿಲ್ಲ. ಪರಭಾಷೆಯ ಚಿತ್ರಗಳಿಗೂ ಕೊಡುವುದರಿಂದ ಕನ್ನಡ ಚಿತ್ರಗಳಿಗೆ ಪ್ರೋತ್ಸಾಹ ಕೊಟ್ಟಂತಾಗುವುದಿಲ್ಲ. ಇದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸು, ಯೋಜನೆ ಮತ್ತು ಯುವಜನ ಕಲ್ಯಾಣ ಶಾಖೆಗಳ ಮಂತ್ರಿಗಳು).—ಈ ಸ್ಕೀಂ ಪ್ರಾರಂಭ ಮಾಡಿದ ಉದ್ದೇಶವೇನೆಂದರೆ, ಈ ರೀತಿ ಸಬ್ಸಿಡಿ ಕೊಡು

(ಶ್ರೀ ರಾಮಕೃಷ್ಣ ಹೆಗೆಡೆ)

ಮುದರಿಂದ ರಾಜ್ಯದಲ್ಲಿ ಸ್ಟುಡಿಯೋಸ್ ಮತ್ತು ಲ್ಯಾಬೊರೇಟರೀಸ್ ಹೆಚ್ಚಾಗುತ್ತದೆ ಎಂದು. ಆದಕ್ಕಾಗಿ ಪ್ರೊಡ್ಯೂಸ್ ಆಗುವ ಪಿಕ್ಚರ್ ಭಾಷೆ ಯಾವುದೇ ಇರಲಿ, ಸಂಪೂರ್ಣವಾದ ಚಿತ್ರ ಇಲ್ಲಿಯೇ ಪ್ರೊಡ್ಯೂಸ್ ಆದರೆ, ಇದಕ್ಕೆ ಸಹಾಯಧನ ಕೊಡಬೇಕೆಂದು ಇದೆ. ಮತ್ತೊಂದು ಸ್ಕೀಂ ಕೇವಲ ಕನ್ನಡ ಚಿತ್ರಗಳಿಗೆ ಮಾತ್ರ ಸಂಬಂಧಪಟ್ಟದ್ದು. ಒಟ್ಟು ವರ್ಷದಲ್ಲಿ ಎಷ್ಟು ಕನ್ನಡ ಚಿತ್ರಗಳು ತಯಾರಾಗುತ್ತವೆ, ಅವುಗಳಲ್ಲಿ ಅತ್ಯುತ್ತಮವಾದ ಚಿತ್ರಕ್ಕೆ ಮೊದಲನೆಯ ಬಹುಮಾನ 50 ಸಾವಿರ ರೂಪಾಯಿ ನಗದು ಬಹುಮಾನ, ಎರಡನೆಯ ಚಿತ್ರಕ್ಕೆ 25 ಸಾವಿರ ಮತ್ತು ಮೂರನೆಯ ಚಿತ್ರಕ್ಕೆ 15 ಸಾವಿರ—ಹೀಗೆ ಕನ್ನಡ ಚಿತ್ರಗಳಿಗೆ ವಿಶೇಷವಾದ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ.

Sri C. K. RAJAIAH SHETTY.—Is it a fact that you have sanctioned a sum of Rs. 20,000 for a picture called 'Mukthi' in addition to the 55 films mentioned in the list furnished here?

Sri RAMAKRISHNA HEGDE.—No, Sir. Also I don't think any picture in any other language has been so far given any subsidy.

ಶ್ರೀ ಎಂ. ನಾಗಪ್ಪ.—ತಾವು ಕೊಟ್ಟಂತಹ ಪಟ್ಟಿಯಲ್ಲಿ 1967-68 ರಲ್ಲಿ 5 ಫಿಲಂಗಳಿಗೆ 1968-69 ರಲ್ಲಿ ಸಾಧಾರಣ 16 ಫಿಲಂಗಳಿಗೆ, 1970-71 ರಲ್ಲಿ 34 ಫಿಲಂಗಳಿಗೆ ಸಾಧಾರಣ 18 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಇಷ್ಟು ಖರ್ಚು ಮಾಡಿದರೂ, ಮುಂದೆ ಇದರ ಬಗ್ಗೆ ಯೋಚನೆ ಮಾಡಲು ಇದೆ. ಈ ಕೈಗಾರಿಕೆಯನ್ನು ತಾವೇ ಸ್ವತಃ ವಹಿಸಿಕೊಂಡು, ಕೆಲವು ಸ್ಟುಡಿಯೋ ಕಟ್ಟಿಸಿ, ಸರ್ಕಾರವೇ ತೆಗೆದುಕೊಂಡು ಫಿಲಂ ತೆಗೆಯುವಂತಹ ವ್ಯವಸ್ಥೆ ಮಾಡುತ್ತಾರೆಯೇ? ಈ ದೃಷ್ಟಿಯಿಂದ ಅವರಿಗೆ ಕೊಡುತ್ತಾ ಹೋದರೆ ಯಾವ ಕಾರ್ಯ ಸಾಧನೆಯಾಗುತ್ತದೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮತ್ತು ಮುಕ್ತಿ ಚಿತ್ರಕ್ಕೆ ಈಗಾಗಲೇ ಸರ್ಕಾರದವರು 20 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ ಎಂದು ಕೇಳಿದ್ದೇವೆ. ಇಂಥಾ ಕೆಲವು ಹೆಸರುಗಳನ್ನು ಈ ಪಟ್ಟಿಯಲ್ಲಿ ಕೊಟ್ಟಿಲ್ಲ. ಆದ್ದರಿಂದ ಪಾರ್ಟ್ ಹೇಮೆಂಟ್ ಮಾಡಿದ ಚಿತ್ರಗಳ ಹೆಸರನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಎಷ್ಟು ಚಿತ್ರಗಳಿಗೆ ಸಬ್ಸಿಡಿಯನ್ನು ಕೊಟ್ಟಿದ್ದೇವೆ ಎನ್ನುವಂಥಾ ದೀರ್ಘವಾದ ಪಟ್ಟಿಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಿದ್ದೇವೆ. 1967-68 ರಿಂದ ಪ್ರಾರಂಭ ಮಾಡಿದಂತಹ ಈ ಒಂದು ಯೋಜನೆಗೆ ಎಷ್ಟು ಹಣ ಖರ್ಚಾಗಿದೆ ಎನ್ನುವಂಥಾದ್ದನ್ನು ಮಾನ್ಯ ಸದಸ್ಯರಿಗೆ ನಾನು ಈಗಾಗಲೇ ಹೇಳಿದ್ದೇನೆ. ಮತ್ತು ಈ ಯೋಜನೆ ಎಷ್ಟು ದಿವಸಗಳವರಿಗೆ ಮುಂದುವರಿಯುತ್ತದೆ ಎನ್ನುವಂಥಾದ್ದನ್ನು ನಾನು ಈಗಾಗಲೇ ಹೇಳಿದ್ದೇನೆ. ಇನ್ನು ಎರಡನೆಯದು ಸರ್ಕಾರದವರೇ ಏತಕ್ಕೆ ಫಿಲಂ ಪ್ರೊಡ್ಯೂಸ್ ಮಾಡುವುದಿಲ್ಲ ಎನ್ನುವಂಥಾದ್ದನ್ನು ಕೇಳಿದರು, ಆ ಬಗ್ಗೆ ಹೇಳುವುದಾದರೆ ಸರ್ಕಾರದವರು ಫಿಲಂ ಪ್ರೊಡ್ಯೂಸ್ ಮಾಡುವುದು ಕಷ್ಟವಾಗುತ್ತದೆ. ಡಾಕ್ಯುಮೆಂಟರಿ ಫಿಲಂಗಳನ್ನು ಬೇಕಾದರೆ ನಾವು ಪ್ರೊಡ್ಯೂಸ್ ಮಾಡಬಹುದು. ಆದರೆ ಫೀಚರ್ ಫಿಲಂಗಳನ್ನು ಪ್ರೊಡ್ಯೂಸ್ ಮಾಡಬೇಕಾದರೆ ಅದಕ್ಕೆ ಸಾಕಷ್ಟು ಸಿಬ್ಬಂದಿ ವರ್ಗದವರನ್ನು ಇಟ್ಟುಕೊಂಡು ಅದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಅದು ಇವತ್ತು ಸರ್ಕಾರದ ವಿಚಾರದಲ್ಲಿಲ್ಲ.

Sri D. B. KALMANKAR.—In list given it will be seen that Bhagavathy Productions and some others have been given thrice or four times. Why preferential treatment is given to some studios?

ಶ್ರೀ ವೀರೇಂದ್ರ ಪಾಟೀಲ್.—ಯಾವುದಾದರೂ ಒಂದು ಪ್ರೊಡಕ್ಷನ್ನಿನವರು ಒಬ್ಬರು 3-4 ಚಿತ್ರಗಳನ್ನು ತಯಾರು ಮಾಡಿದರೆ ಒಂದೇ ಚಿತ್ರಕ್ಕೆ ಸಬ್ಸಿಡಿ ಕೊಡಬೇಕೆಂದೇನೂ ಇಲ್ಲ. ಅವರು ಎಷ್ಟು ಫಿಲಂಗಳನ್ನು ತಯಾರು ಮಾಡುತ್ತಾರೆಯೋ ಅಷ್ಟು ಫಿಲಂಗಳಿಗೂ ಕೂಡ ಕಾನೂನು ಪ್ರಕಾರ ಸಬ್ಸಿಡಿ ಕೊಡಬೇಕಾಗುತ್ತದೆ. ಆಮೇಲೆ ಮುಕ್ತಿ ಎನ್ನುವ ಚಿತ್ರಕ್ಕೆ 20 ಸಾವಿರ ರೂಪಾಯಿಗಳನ್ನು ಕೊಟ್ಟಿದೆ ಎಂದು ಹೇಳುತ್ತಾರೆ. ಆ ಇನ್‌ಫರ್‌ಮೇಷನ್ ಈಗ ನನ್ನ ಮುಂದೆ ಇಲ್ಲ. ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದನ್ನು ಹೇಳುತ್ತೇನೆ.